☎: 080 - 22870060
🖷: 080- 22875798
email:dmekarnataka@yahoo.com

# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
# DIRECTORATE OF MEDICAL EDUCATION

ಆನಂದರಾವ್‌ವೃತ್ತ, ಬೆಂಗಳೂರು–560 009.
Ananda Rao Circle, BANGALORE-560 009.

ಸಂಖ್ಯೆ: ನಿವೈಶಿ/ಪಿಜಿಎಸ್/೦7 /2019-20 ದಿನಾಂಕ: 18.07.2019

<u>ಅಧಿಕೃತ ಜ್ಞಾಪನಾ ಪತ್ರ</u>

ವಿಷಯ : ವೈದ್ಯಕೀಯ ಕಾಲೇಜುಗಳಲ್ಲಿ ಮಂಜೂರಾದ ಸೀನಿಯರ್ ರೆಸಿಡೆಂಟ್/ ಟ್ಯೂಟರ್ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಕೋಟಾದಡಿ ಸೀಟು ಪಡೆದು ಸ್ನಾತಕೋತ್ತರ ಪದವಿ ಮುಗಿಸಿದ ಅಭ್ಯರ್ಥಿಗಳು ಸೀಟು ಪಡೆಯುವ ಸನ್ನಿವೇಶದಲ್ಲಿ ಒಂದು ವರ್ಷದ ಕಡ್ಡಾಯ ಸೇವೆಯನ್ನು ಪೂರೈಸುವುದಾಗಿ ಮುಚ್ಚಳಿಕೆ ನೀಡಿರುವುದು ಸರಿಯಷ್ಟೆ. ಈ ನಿಟ್ಟಿನಲ್ಲಿ ಇಂತಹ ಅಭ್ಯರ್ಥಿಗಳಿಗೆ ಸೀನಿಯರ್ ರೆಸಿಡೆಂಟ್/ ಟ್ಯೂಟರ್ ಖಾಲಿ ಹುದ್ದೆಗಳನ್ನು ನೀಡಲು ನಿರ್ಣಯಿಸಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ದಿನಾಂಕ 22.07.2019 ಮತ್ತು 23.07.2019ರಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು ಇಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಏರ್ಪಡಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 22-07-2019 ಮತ್ತು 23-07-2019 ರಂದು ನಡೆಯುವ ಕೌನ್ಸಿಲಿಂಗ್‌ನಲ್ಲಿ ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿದ ಅಭ್ಯರ್ಥಿಗಳಿಗೆ ವಿವಿಧ ಕಾಲೇಜುಗಳಲ್ಲಿ ಮಂಜೂರಾದ ಸೀನಿಯರ್ ರೆಸಿಡೆಂಟ್/ ಟ್ಯೂಟರ್ ಹುದ್ದೆಗಳ ಪೈಕಿ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ಸ್ಥಳ ನಿಯುಕ್ತಿಗೊಳಿಸಲಾಗುವುದು. (ಈಗಾಗಲೇ ಖಾಯಂ ಸೀನಿಯರ್ ರೆಸಿಡೆಂಟ್/ಟ್ಯೂಟರ್ ಹುದ್ದೆಗಳ ಎದುರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ವೈದ್ಯರುಗಳನ್ನು ಹೊರತುಪಡಿಸಿ) ಇಂತಹ ಅಭ್ಯರ್ಥಿಗಳು ಸಂಬಂಧಿಸಿದ ಕಾಲೇಜುಗಳಿಗೆ ಹಾಜರಾದಾಗ ಈ ಹಿಂದೆ ಸದರಿ ಹುದ್ದೆಗಳಿಗೆ ಎದುರಾಗಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ಕೌನ್ಸಿಲಿಂಗ್ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಡಲು ಅನುವು ಮಾಡಿಕೊಡುವುದು ಹಾಗೂ ತಮ್ಮ ಕಾಲೇಜುಗಳಲ್ಲಿ ಸೀನಿಯರ್ ರೆಸಿಡೆಂಟ್/ಟ್ಯೂಟರ್ ಖಾಲಿಯಿರುವ ಹುದ್ದೆಗಳ ಮಾಹಿತಿಯನ್ನು ಜರೂರಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು ಈ ನಿಟ್ಟಿನಲ್ಲಿ ಯಾವುದೇ ನ್ಯೂನ್ಯತೆ ಕಂಡುಬಂದಲ್ಲಿ ಸಂಬಂಧಿಸಿದ ಡೀನ್ ಹಾಗೂ ನಿರ್ದೇಶಕರನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ನಿರ್ದೇಶಕರು, ವೈದ್ಯಕೀಯ ಶಿಕ್ಷಣ